# ಪ್ರಸಂಗದ ಟಿಪ್ಪಣಿ:
# "ಮತ್ತು ... ಆತನು ಹೂಣಲ್ಪಟ್ಟನು"

ಮರಣ, ಹೂಣಿಡುವಿಕೆ ಹಾಗೂ ಪುನರುತ್ಥಾನ ಹೊಸ ಒಡಂಬಡಿಕೆಯಲ್ಲಿನ ಮೂರು ಪ್ರಮುಖ ಅಂಶಗಳಾಗಿವೆ. ತನ್ನ ಮರಣ ಹಾಗೂ ಪುನರುತ್ಥಾನದ ಬಗ್ಗೆ ಯೇಸು ಆಗಾಗ್ಗೆ ಮುಂತಿಳಿಸಿದ್ದನು (ಮತ್ತಾಯ 16:21; 17:22, 23; ಲೂಕ 18:31-33). ತನ್ನ ಹೂಣಿಡುವಿಡುವಿಕೆಯ ಬಗ್ಗೆಯೂ ಮುಂದಾಗಿ ಪ್ರಕಟಿಸಿದನು. ಯೋನನು "ಮೀನಿನ ಉದರದಲ್ಲಿ ಮೂರು ದಿವಸ ಇದ್ದ ಉದಾಹರಣೆಯನ್ನು ಆತನು ನೀಡಿ," "... ಹಾಗೆಯೇ ಮನುಷ್ಯಕುಮಾರನು ಮೂರುದಿನ ರಾತ್ರಿ ಹಗಲು ಭೂಗರ್ಭದೊಳಗೆ ಇರುವನು" (ಮತ್ತಾಯ 12:40). ಬೆಥಾನ್ಯನಲ್ಲಿ ಮರಿಯಳು ಆತನನ್ನು ಅಭಿಷೇಕ ಮಾಡಿದಾಗ, ಯೇಸು ತನ್ನ ಪುನರುತ್ಥಾನದ ಬಗ್ಗೆ ನೇರವಾಗಿ ತಿಳಿಸಿದ್ದನು. ಅವನು ಹೀಗೆ ಹೇಳಿದ್ದು, "ಈಕೆಯು ಮುಂದಾಗಿ ನನ್ನ ಉತ್ತರಕ್ರಿಯೆಗೋಸ್ಕರ ನನ್ನ ದೇಹಕ್ಕೆ ಈ ತೈಲವನ್ನು ಹಚ್ಚಿದ್ದಾಳೆ" (ಮಾರ್ಕ 14:8; ಮತ್ತಾಯ 26:12; ಯೋಹಾನ 12:7).

ಇತರೆ ಎರಡು ವಿಷಯಗಳಷ್ಟೆ, ಹೂಣಿಡುವಿಕೆಯೂ ಸಹ ಪ್ರಮುಖವಾಗಿದೆ; ಆದರೆ (ಆತನ ಮರಣ) ಪುನರುತ್ಥಾನಗಳು (ಆತನ ಹೂಣಿಡುವಿಕೆಯನ್ನು) ಮರೆಮಾಡಿರುತ್ತವೆ. ಯೇಸುವಿನ ಹೂಣಿಡುವಿಕೆಯ ಸಂಕೇತವೇನು? ಸುವಾರ್ತೆಯ ಕಥೆಯಲ್ಲಿ ಇದು ಯಾವ ಸ್ಥಾನವನ್ನು ಹೊಂದಿರುತ್ತದೆ? ನಮ್ಮ ಜೀವಿತದ ಮೇಲೆ ಬೀರಬಹುದಾದ ಪರಿಣಾಮವೇನು? ಕೆಲಸಮಯವನ್ನು ತೆಗೆದುಕೊಂಡು ಈ ವಿಚಾರವನ್ನು ಚರ್ಚಿಸೋಣ.

### ಹಿಂದೆ ನಡೆದ ಆತನ ಹೂಣಿಡುವಿಕೆ

ಯೇಸು ಸತ್ತನು ಎಂಬ ನಿಖರತೆಯನ್ನು ತಿಳಿದ ಅರಿಮಥಾಯದ ಯೋಸೇಫನು ಯೇಸುವಿನ ದೇಹವನ್ನು ಪಡೆಯಲು ಪಿಲಾತನಿಂದ ಅನುಮತಿಯನ್ನು ಪಡೆದನು. ನಿಕೋದೇಮನ ಸಹಾಯ ಪಡೆದ ಯೋಸೇಫನು ಆತನ ದೇಹವನ್ನು ಬಟ್ಟೆಯಿಂದ ಸುತ್ತಿ, ಸಮಾಧಿಯಲ್ಲಿಟ್ಟನು (ಮತ್ತಾಯ 27:59, 60; ಮಾರ್ಕ 15:46; ಲೂಕ 23:50-53; ಯೋಹಾನ 19:38-40).

*ಹೂಣಿಡುವಿಕೆಯ ಪ್ರೀತಿಯ ಒಂದು ಸಂಕೇತ.* ಒಂದು ವೇಳೆ ಯೋಸೇಫನು ಈ ಕಾರ್ಯವನ್ನು ಮಾಡದೆ ಹೋಗಿದ್ದರೆ, ಯೇಸುವಿನ ದೇಹವನ್ನು ಅಪರಾಧಿಗಳ ನಡುವೆ ವಿಳಾಸವಿಲ್ಲದ ಸಮಾದಿಯಲ್ಲಿ ಎಸೆದು ಬಿಡುವ ಸಾಧ್ಯತೆಯು ಇತ್ತು.[1]

*ಅದು ಒಂದು ಧೈರ್ಯದ ಕ್ರಿಯೆಯಾಗಿತ್ತು.* ಯೋಸೇಫ ಹಾಗೂ ನಿಕೋದೇಮರು ಬಹುಪ್ರಯಾಸದಿಂದ ಆ ದೇಹವನ್ನು ಪಡೆದು, ಅದನ್ನು ಹೂಣಿಟ್ಟರು.

*ಅದು ಅಗತ್ಯವಿದ್ದ ಕ್ರಿಯೆಯಾಗಿತ್ತು.* ಧರ್ಮಶಾಸ್ತ್ರದ ಪ್ರಕಾರವಾಗಿ ಸೂರ್ಯಸ್ತಮಾನದ ಒಳಗಡೆ ಯೇಸುವಿನ ದೇಹವನ್ನು ಸಮಾಧಿ ಮಾಡಬೇಕಿತ್ತು. *ಆತನು ಸತ್ತಿರುವ ನಿಖರತೆಯನ್ನು ದೃಢಪಡಿಸಿಕೊಂಡಿದ್ದರಿಂದ, ಆತನು ಪುನಃ ಎದ್ದು ಬಂದ ಸಂಗತಿಯನ್ನು ನಂಬಲು ಸಾಧ್ಯವಾಯಿತು.*

*ಅದು ಯೋಗ್ಯವಾದ ಕ್ರಿಯೆಯಾಗಿತ್ತು.* ಮಿಲಿಯಾಂತರ ಜನರು ಸತ್ತು, ಅವರ ದೇಹಗಳನ್ನು ಸಮಾಧಿಯಲ್ಲಿ ಇರಿಸಲಾಗಿದೆ. "ಆತನು ತನ್ನ ಸಹೋದರರಂತೆ ಆದನು" (ಇಬ್ರಿಯ 2:17), ಎಂಬ ಮಾತಿನ ಪ್ರಕಾರ, "ಆತನ ದೇಹವನ್ನು ಭೂಗರ್ಭದಲ್ಲಿ ಇಡಲಾಯಿತು" (ಮತ್ತಾಯ

12:40). ಆದ್ದರಿಂದ ಆತನು ಎದ್ದು ಬಂದ ಮಹತ್ವವನ್ನು ಜನರು ಅರಿಯಲಾಯಿತು.

*ಅದು ನಿರೀಕ್ಷಿಸಿದ್ದ ಕ್ರಿಯೆಯಾಗಿತ್ತು.* ಮೂರು ವಿಧಾನಗಳಲ್ಲಿ "ಹೂಣಿಡುವಿಕೆಯು" ಎರಡನೆಯ ವಿಧಾನ ಎಂಬುದನ್ನು ಯೋಸೇಫ, ನಿಕೋದೇಮರು ಸಹ ಅರಿತಿರಲಿಲ್ಲ. ಹೂಣಿಡುವಿಕೆಯ ಘಟನೆಯ ಅಂತ್ಯವಾಗಿರದೆ, ನಿರೀಕ್ಷಿಸಿದ್ದ ಆರಂಭವಾಗಿತ್ತು.

## ವರ್ತಮಾನಕಾಲದ ನಮ್ಮ ಹೂಣಿಡುವಿಕೆ

"ಹೂಣಿಡುವಿಕೆ" ಅಂದರೆ, ದೈಹೀಕವಾಗಿ ಸತ್ತು ಹೋದವರ ದೇಹಗಳನ್ನು ಹೂಣಿಡುವ ಸಂಗತಿಯನ್ನು ನಾನು ಹೇಳುತ್ತಿರುವದಿಲ್ಲ. ದೀಕ್ಷಾಸ್ನಾನದ ಮೂಲಕ ಯೇಸುವಿನೊಂದಿಗೆ ಹೂಣಲ್ಪಡುವ ವಿಚಾರವನ್ನು ನಾನು ತಿಳಿಸುತ್ತಿದ್ದೇನೆ. ದೀಕ್ಷಾಸ್ನಾನ ಹಾಗೂ ಕ್ರಿಸ್ತನ ಯಜ್ಞದ ನಡುವೆ ಇರುವ ಸಂಬಂಧದ ಬಗ್ಗೆ ಹೊಸ ಒಡಂಬಡಿಕೆಯು ತಿಳಿಸುತ್ತದೆ (ರೋಮಾಪುರ 6:3, 4; ಕೊಲಸ್ಸೆ 2:12).

*ಇದು ಸಹ ಪ್ರತಿಕಾರವಾದ ಕ್ರಿಯೆ.* ನಾವು ಯೇಸುವನ್ನು ಪ್ರೀತಿಸುವದಾದರೆ, ಆತನ ದೀಕ್ಷಾಸ್ನಾನದ ಅಪ್ಪಣೆಯನ್ನು ಪಾಲಿಸುತ್ತೇವೆ (ಯೋಹಾನ 14:15).

*ಇದು ಧೈರ್ಯದ ಒಂದು ಕ್ರಿಯೆ.* ದೀಕ್ಷಾಸ್ನಾನ ಮಾಡಿಸಿಕೊಳ್ಳಲು ಧೈರ್ಯದ ಅಗತ್ಯವಿದೆ.

*ಅಗತ್ಯದ ಕ್ರಿಯೆ.* ವಿಧೇಯತೆಯಿಂದ ದೀಕ್ಷಾಸ್ನಾನ ಹೊಂದಿ ರಕ್ಷಣೆಯ ಆಶೀರ್ವಾದವನ್ನು ಪಡೆಯಬೇಕೆಂದು ಸತ್ಯವೇದವು ಉಪದೇಶಿಸುತ್ತದೆ (ಮಾರ್ಕ 16:15, 16; ಅಪೊಸ್ತಲರ ಕೃತ್ಯಗಳು 2:38; ಗಲಾತ್ಯ 3:26, 27).

*ಯೋಗ್ಯವಾದ ಕ್ರಿಯೆ.* ನಾವು ಯೇಸುವಿನ ಶಿಲುಬೆಯನ್ನು ಹೊರುವವರಾದರೆ (ಮತ್ತಾಯ 16:24) ನಾವು "ಆತನೊಂದಿಗೆ ಹೂಣಲ್ಪಡಬೇಕು" (ರೋಮಾಪುರ 6:4). ನಾವು ಮುಳುಗು ದೀಕ್ಷಾಸ್ನಾನಕ್ಕೆ ಒಳಪಡಬೇಕು, ತಲೆಯ ಮೇಲೆ ಚಿಮುಕಿಸುವ ಸ್ನಾನವಲ್ಲ.

*ಇದು ಒಂದು ನಿರೀಕ್ಷಿತ ಕ್ರಿಯೆ.* ನಾವು ದೀಕ್ಷಾಸ್ನಾನದ ಮೂಲಕ ಹೂಣಿಲ್ಪಡುವದು ಎರಡನೆಯ ವಿಧಾನವಾಗಿದೆ.[2] ಆ ನೀರಿನ ಸಮಾಧಿಯಿಂದ ಎದ್ದು ಬರುವದು. ಮೂರನೆಯ ಹಂತವಾಗಿದೆ. "ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು" (ರೋಮಾಪುರ 6:4). ನಾವು ಕ್ರೈಸ್ತ ಬಾಳ್ವೆಯನ್ನು ಜೀವಿಸಿ, ನಮ್ಮ ದೇಹವನ್ನು ಸಮಾಧಿಮಾಡಿ, ಪುನಃ ಅದು ಎದ್ದು ಬರುವಂಥದ್ದು ಅಮೋಘವಾಗಿರುತ್ತದೆ, ಯಾಕಂದರೆ ಅದು ಮರಣದ ಅಂತ್ಯವಲ್ಲ. "ಒಂದು ದಿವಸ ನಾವು ಸಹ ಆತನೊಂದಿಗೆ ಎದ್ದು ಬರುತ್ತವೆ" (1 ಕೊರಿಂಥ 15:20, 23)!

---

ಟಿಪ್ಪಣಿಗಳು

[1]"ದಿನದ ಇತಿಹಾಸದಲ್ಲಿ ಮೂರು ಮುಖ್ಯಾಂಶಗಳು" ಎಂಬ ಪಾಠವನ್ನು ಈ ಪುಸ್ತಕದಲ್ಲಿ ನೋಡಿರಿ. [2]ಮೊದಲನೆ ಮೆಟ್ಟಿಲು "ಸ್ವಾರ್ಥ"ಕ್ಕೆ ಸಾಯುವದು (ನೋಡಿರಿ ರೋಮಾಪುರ 6:6).